ಆ) ಇದೆ.

ಇ)1. ವೆನಿಲ್ಲಾ ಬೆಳೆಯ ಬೇಸಾಯ ಕ್ರಮಗಳ ಪರಿಚಯ ಮಾಡಿಕೊಡಲು ಪ್ರಾತ್ಯಕ್ಷತೆಗಳನ್ನು ಏರ್ಪಡಿಸಿ ವೆನಿಲ್ಲಾ ಗಿಡಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

2. ವೆನಿಲ್ಲಾ ಸಂಸ್ಕರಣ ಘಟಕಗಳ ಸ್ಥಾಪನೆಗಾಗಿ ಸಹಾಯ ಧನವನ್ನು ನೀಡಲಾಗುವುದು. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ತಲಾ ಒಂದು ಘಟಕದ ಸ್ಥಾಪನೆಗೆ ಸಹಾಯಧನ ನೀಡುವ ಕಾರ್ಯಕ್ರಮವಿರುತ್ತದೆ.

3. ವೆನಿಲ್ಲಾ ಕೃಷಿಯ ಬಗ್ಗೆ ತಾಂತ್ರಿಕ ಮಾಹಿತಿಯನ್ನು ತರಬೇತಿ ವಿಚಾರ ಸಂಕಿರಣ, ಪ್ರಕಟಣೆ ಮೂಲಕ ರೈತರಿಗೆ ಒದಗಿಸಲಾಗುತ್ತಿದೆ.

4. ವೆನಿಲ್ಲಾದ ರಪ್ತಿಗೆ ಉತ್ತೇಜನ ನೀಡಲು ವೆನಿಲ್ಲಾ ಕೃಷಿ ರಫ್ತುವಲಯವನ್ನು ಸ್ಥಾಪಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ವೆನಿಲ್ಲಾ ಕೃಷಿ ರಫ್ತುವಲಯದ ವ್ಯಾಪ್ತಿಗೆ ಒಳಪಡುತ್ತವೆ.

ಮೈಸೂರು ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು

4661 (5402) : ಶ್ರೀ ಗುರುಸ್ವಾಮಿ ಎ. ಎಸ್. (ಚಾಮುಂಡೇಶ್ವರಿ) ಮಾನ್ಯ ಮಹಿಳಾ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿರುವ ಸ್ತ್ರೀಶಕ್ತಿ ಸಹಾಯ ಸಂಘಗಳು ಎಷ್ಟು? (ಮೈಸೂರು ತಾಲ್ಲೂಕಿನ ಸ್ತ್ರೀಶಕ್ತಿ ಸಹಾಯ ಸಂಘಗಳ ವಿವರ ನೀಡುವುದು)

ಆ) ಮೈಸೂರು ತಾಲ್ಲೂಕಿನ ಎಲ್ಲ ಸ್ತ್ರೀಶಕ್ತಿ ಸಹಾಯ ಸಂಘಗಳಿಗೆ ಸಹಾಯಧನ ನೀಡಲಾಗಿದೆಯೇ? ಇಲ್ಲವಾದರೆ ಯಾವಾಗ ನೀಡಲಾಗುವುದು

ಇ) ಹೊಸದಾಗಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸ್ಥಾಪನೆ ಮತ್ತು ನೊಂದಣಿಗೆ ನಿರ್ಬಂಧ ವಿಧಿಸಲಾಗಿದೆಯೇ? ಇಲ್ಲವಾದರೆ ನೊಂದಣಿಗೆ ಇರುವ ತೊಡಕು ಏನು?

ಈ) ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಮತ್ತು ಯೋಜನೆಯನ್ನು ಜನಪ್ರಿಯಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 3701 ಸ್ತ್ರೀಶಕ್ತಿ ಗುಂಪುಗಳಿವೆ.

ಮೈಸೂರು ತಾಲ್ಲೂಕಿನಲ್ಲಿ ಒಟ್ಟು 449 ಸ್ತ್ರೀಶಕ್ತಿಗುಂಪುಗಳು ರಚನೆಯಾಗಿದ್ದು. 7479 ಮಹಿಳೆಯರು ಸದಸ್ಯರಾಗಿರುತ್ತರೆ. ಈ ಗುಂಪುಗಳು ಒಟ್ಟು ರೂ. 69.99 ಲಕ್ಷಗಳನ್ನು ಉಳಿತಾಯ ಮಾಡಿದ್ದು. ಒಟ್ಟು 2114 ಸದಸ್ಯರುಗಳು ವಿವಿಧ ಬ್ಯಾಂಕುಗಳಿಂದ ಆದಾಯೋತ್ಪನ್ನ ಚಟುವಟಿಕೆಯನ್ನು ಹಮ್ಮಿಕೊಳ್ಳಲು ರೂ. 128.77 ಲಕ್ಷಗಳ ಸಾಲವನ್ನು ಪಡೆದಿರುತ್ತಾರೆ. ಸರ್ಕಾರದಿಂದ 165 ಗುಂಪುಗಳಿಗೆ ರೂ. 5.75 ಲಕ್ಷಗಳನ್ನು ಸುತ್ತುನಿಧಿಯಾಗಿ ಬಿಡುತಡೆ ಮಾಡಿದೆ.

ಆ) ಮೈಸೂರು ತಾಲ್ಲೂಕಿನಲ್ಲಿ ಇದುವರೆಗೆ ಒಟ್ಟು 165 ಗುಂಪುಗಳಿಗೆ ಸುತ್ತುನಿಧಿ ರೂಪದಲ್ಲಿ ಸಹಾಯಧನ ನೀಡಲಾಗಿದೆ. ಉಳಿಕೆ ಗುಂಪುಗಳಿಗೆ ಈ ಆರ್ಥಿಕ ಸಾಲಿನ ಅಂತ್ಯದೊಳಗೆ ಸಹಾಯಧನ ನೀಡಲಾಗುವುದು

ಇ) ಇಲ್ಲ

2003–04 ನೇ ಸಾಲಿಗೆ ಹೆಚ್ಚುವರಿಯಾಗಿ 25000 ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲು ಗುರಿ ನಿಗಧಿಪಡಿಸಲಾಗಿದ್ದು , ಈ ಗುಂಪುಗಳನ್ನು ನೊಂದಣಿ ಮಾಡುವ ಅವಶ್ಯಕತೆ ಇರುವುದಿಲ್ಲ.

ಈ) ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಬಗ್ಗೆ ಹಾಗೂ ಯೋಜನೆಯನ್ನು ಜನಪ್ರಿಯಗೊಳಿಸಲು ಸರ್ಕಾರದ ವಿದ್ಯುತ್ಮಾನ ಹಾಗೂ ಪತ್ರಿಕೆ ಮಾಧ್ಯಮಗಳ ಮೂಲಕ ಯೋಜನೆಯ ಕುರಿತು ಕಾರ್ಯಕ್ರಮವನ್ನು ಬಿತ್ತರಿಸುವುದು, ಜೊತೆಗೆ ಸಾಮಾನ್ಯ ಜನ ಉಪಯೋಗಕ್ಕಾಗಿ ಹಲವಾರು ಕೈಪಿಡಿ, ಬ್ರೋಚರ್ ಕ್ಯಾಲೆಂಡರ್ ಗಳನ್ನು ತಯಾರಿಸಿ ನೀಡಲಾಗಿದೆ. ಇದಲ್ಲದೆ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ವಿಚಾರಗೋಷ್ಠಿ / ಕಾರ್ಯಗಾರ ವಿನಿಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಹಾಫ್‌ಕಾಮ್ಸ್‌ನಲ್ಲಿ ಅವ್ಯವಹಾರ

4663 (5404) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಾಫ್‌ಕಾಮ್ಸ್‌ನಲ್ಲಿ ಕಂಡು ಬಂದ ಅವ್ಯವಹಾರದ ಪ್ರಕರಣಗಳು ಎಷ್ಟು;

ಆ) ಈ ರೀತಿಯ ಅವ್ಯವಹಾರದ ನಡೆಯಲು ಕಾರಣರಾದ ಅಧಿಕಾರಿಗಳು ಯಾರು; ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಅವ್ಯವಹಾರದ ಹಣವನ್ನು ವಸೂಲಿ ಮಾಡಿರುವುದೆಷ್ಟು;

ಈ) ಈ ರೀತಿಯ ಅವ್ಯವಹಾರ ಆಗದಂತೆ ತೆಗೆದುಕೊಂಡಿರುವ ಕ್ರಮಗಳೇನು;

ಉ) ಹಾಪ್‌ಕಾಮ್ಸ್ ಮೂಲಕ ಸರ್ಕಾರಿ ವಸತಿ ನಿಯಲಗಳು ಮತ್ತು ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ತರಕಾರಿ ಕೊಳ್ಳುವಂತೆ ಸರ್ಕಾರ ನಿರ್ಬಂಧ ಹಾಕಿರುವುದೇ; ಇಲ್ಲವಾದರೆ ಹಾಪ್‌ಕಾಮ್ಸ್ ಬಲಪಡಿಸಲು ಖರೀದಿಗೆ ನಿರ್ಬಂಧ ವಿಧಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಾಪ್‌ಕಾಮ್ಸ್‌ನಲ್ಲಿ ಒಟ್ಟು 64 ಅವ್ಯವಹಾರದ ಪ್ರಕರಣಗಳು ಕಂಡು ಬಂದಿರುತ್ತವೆ.

ಆ) ಈ ರೀತಿ ಅವ್ಯವಹಾರದ ನಡೆಯಲು ಸಂಘದ ಅಧಿಕಾರಿಗಳು ಮತ್ತು ನೌಕರರು ಕಾರಣರಾಗಿದ್ದು, ಅವರುಗಳ ಹೆಸರನ್ನು ಅನುಬಂಧದಲ್ಲಿ ನೀಡಲಾಗಿದೆ.

ಇವರುಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ. ಹಗೂ ಅವ್ಯವಹಾರ ಮಾಡಿದ ಹಣ ವಸೂಲಾತಿಗೆ ಕಾನೂನು ಕ್ರಮ ಜರುಗಿಸಲಾಗಿದೆ.

ಇ) ರೂ. 16,59,771–00

ಈ) ಸಂಘವು ನೌಕರರ ಮೆಲೆ ಮೇಲ್ವಿಚಾರಣೆ ಮತ್ತು ಆಗಿಂಧಾಗ್ಗೆ ತಪಾಸಣೆ ಮಾಡಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಉ) ಇಲ್ಲ.

ನಿರ್ಬಂಧ ವಿಧಿಸುವ ಉದ್ದೇಶ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.